೭) ಶಕ್ತಿನಗರ	—	ರಾಯಚೂರು ಜಿಲ್ಲೆ	೧-೧೧-೮೯
೮) ಕಾಗನೊಳಿ	—	ಬೆಳಗಾಂ ಜಿಲ್ಲೆ	೯-೧೧-೮೪
೯) ಕಾಂನಗರ	—	ಕಾರವಾರ ಜಿಲ್ಲೆ	೧-೧೨-೮೯
೧೦) ಜಾಲ್ಕಿ	—	ಬಿಜಾಪುರ ಜಿಲ್ಲೆ	೫-೧೨-೮೪
೧೧) ತಲಪಾಡಿ	—	ದಕ್ಷಿಣಕನ್ನಡ ಜಿಲ್ಲೆ	೩- ೧-೮೫

ಅ) ಕಳೆದ ೩ ವರ್ಷಗಳಲ್ಲಿ ಈ ಚೆಕ್ ಪೋಸ್ಟ್‌ಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯದ ವಿವರಗಳು :—

ಅವಧಿ	ಆದಾಯ (ಲಕ್ಷಗಳಲ್ಲಿ)
೧) ೧೯೮೭-೮೮	ರೂ. ೧೫೫.೪೪
೨) ೧೯೮೮-೮೯	ರೂ. ೧೮೬.೮೧
೩) ೧೯೮೯-೯೦	ರೂ. ೨೦೩.೫೨

ನಾಗಮಂಗಲ ತಾಲ್ಲೂಕಿಗೆ ಬಸ್ ಸೌಲಭ್ಯ

೯೪೭ (೧೬೮೮) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ನಾಗಮಂಗಲ ತಾಲ್ಲೂಕಿಗೆ ಇದುವರೆಗೆ ಪ್ರತ್ಯೇಕವಾಗಿ ಓಡಿಸುತ್ತಿರುವ ಬಸ್‌ಗಳೆಷ್ಟು? (ಕೆ. ಎಸ್. ಆರ್. ಟಿ. ಸಿ. ಯಿಂದ) ಗ್ರಾಮಾಂತರ ಪ್ರದೇಶಕ್ಕೆಂದು (ಬೆಂಗಳೂರು, ತುಮಕೂರು, ಮೈಸೂರು ಹಾಸನಗಳಿಂದ ಬೇರೆ ನಗರಗಳಿಗೆ ಹೋಗುವುದನ್ನು ಬಿಟ್ಟು)

ಆ) ಈಗಾಗಲೇ ೭ ಬಸ್‌ಗಳನ್ನು ಗ್ರಾಮಾಂತರ ಪ್ರದೇಶಕ್ಕೆ ಓಡಿಸಬೇಕೆಂದು ಮಾಡಿದ ಮನವಿ ಸರ್ಕಾರದ ಗಮನದಲ್ಲಿದೆಯೇ ?

ಇ) ಗಮನದಲ್ಲಿದ್ದರೆ ಯಾವಾಗ ಪ್ರಾರಂಭ ಮಾಡುತ್ತೀರಿ ತಿಳಿಸಿ?

ಈ) ಮಂಡ್ಯ ಜಿಲ್ಲೆಯಲ್ಲಿ ಇದುವರೆಗೆ ಗ್ರಾಮಾಂತರ ಪ್ರದೇಶಕ್ಕೆಂದು ತಾಲ್ಲೂಕಿಗೆ ಸೀಮಿತವಾಗಿ ತಾಲ್ಲೂಕುವಾರು ಓಡಿಸುತ್ತಿರುವ ಷೆಡ್ಯೂಲ್‌ಗಳೆಷ್ಟು (ಬಸ್‌ಗಳೆಷ್ಟು)?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು) :—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ನಾಗಮಂಗಲದಿಂದ ಕೆ. ಆರ್. ಪೇಟೆಗೆ ಪ್ರತ್ಯೇಕ ಸಾರಿಗೆಗಳನ್ನು ಒದಗಿಸಿದೆ ಇತರೆ ನಾಗಮಂಗಲ ತಾಲ್ಲೂಕಿನ ಹಳ್ಳಿಗಳಿಗೆ ಈ ಸೌಲಭ್ಯ ಒದಗಿಸಿಲ್ಲ.

ಆ) ಮನವಿಯಂತೆ ಸ್ವೀಕರಿಸಲಾಗಿದೆ.

ಇ ಷೆಡ್ಯೂಲ್‌ಗಳು ನಾಗಮಂಗಲ ತಾಲ್ಲೂಕಿಗೆ ಈ ಕೆಳಕಂಡಂತಿವೆ:

೧ ಬೋಗಾವಿಯಿಂದ ನಾಗಮಂಗಲದ ಮೂಲಕ ಬಿಂಡಿಗನವಿಲೆ (೬೦ ಕಿ ಮೀ., ದ ೨ರ ದಿನಕ್ಕೆ ೪ ಅಥವಾ ೫ ಟ್ರಿಪ್ಪುಗಳು) ಮತ್ತು ವಾಪಸ್ ಅದೇ ಮಾರ್ಗದಲ್ಲಿ ಬೋಗಾವಿ ಒಟ್ಟು ೩೦೦ ಕಿ.ಮೀ).

೨ ದೇವಾಲಾಪುರದಿಂದ ನಾಗಮಂಗಲದ ಮಾರ್ಗ ಮೈಲಾರ ಪಟ್ಟಣ ಮೂಲಕ ಯಡಿಯೂರು ಮತ್ತು ಅದೇ ಮಾರ್ಗದಲ್ಲಿ ವಾಪಸ್ ದೇವಲಾಪುರ (೬೦ ಕಿ. ಮೀ. ದೂರ ದಿನಕ್ಕೆ ೪.೫ ಟ್ರಿಪ್ಪುಗಳು ಒಟ್ಟು ೩೦೦ ಕಿ. ಮೀ. ದೂರ)

೩. ಕದಬನಹಳ್ಳಿಯಿಂದ ಬಿಂಡಿಗನವಿಲೆ ಮೋಯಿಗೋನಹಳ್ಳಿ, ನರಗನಹಳ್ಳಿ ಅಂಚೆಬೂನ ಹಳ್ಳಿ ಬೆಳ್ಳೂರು ಮಾರ್ಗ ತರಬನಹಳ್ಳಿ.

೪. ಚಿಕ್ಕನಹಳ್ಳಿಯಿಂದ ನಾಗಮಂಗಲ ಮಾರ್ಗ ಆದಿ ಚುಂಚನಗಿರಿ ಮತ್ತೆ ವಾಪಸ್ಸು ಅದೇ ಮಾರ್ಗದಲ್ಲಿ ಚಿಕ್ಕನಹಳ್ಳಿ.

೫. ಬೆಳ್ಳೂರು ಚಾಮಲಾಪುರ, ಹರಳ್ಳಿ ಚೆನ್ನಾಪುರ ಬಿಂಡಿಗನವಿಲೆ ಹದ್ದಳ್ಳಿ ಪಳ್ಳಿ ಪಿ. ಬೆಟ್ಟನಹಳ್ಳಿ ತಟ್ಟೀಕೆರೆ ಮಾರ್ಗ ಬೋಗಾದಿ.

೬. ಕರಬಹಳ್ಳಿ ಬಿಂಡಿಗನವಿಲೆ ನಾಗಮಂಗಲ ಅಂಚೆಬಿಟ್ಟನಹಳ್ಳಿ ಬೆಳ್ಳೂರು ಕ್ರಾಸ್ ನಾಗತಿಹಳ್ಳಿ ಕರಬಹಳ್ಳಿ ಮತ್ತು ಅದೇ ಮಾರ್ಗದಲ್ಲಿ ವಾಪಸ್.

೭. ಇನ್ನೂ ೧ ಬಸ್ ನಾಗಮಂಗಲ ಬೆಳ್ಳೂರು ಚುಂಚನಗಿರಿ ಮತ್ತು ವಾಪಸ್ ಅದೇ ಮಾರ್ಗದಲ್ಲಿ.

೧) ಈ ಇಡೀ ಪ್ರದೇಶವು ಬಾಸಗೀ ವಲಯಕ್ಕೆ ಸೇರಿದ್ದು ಈ ಕಾರಣದಿಂದ ಈ ಸದ್ಯದಲ್ಲಿ ಕ. ರಾ. ರ. ಸಾ. ನಿಗಮವು ಈ ಪ್ರದೇಶಗಳಿಗೆ ತನ್ನ ಸೌಲಭ್ಯವನ್ನು ವಿಸ್ತರಿಸುವ ಉದ್ದೇಶವನ್ನು ಈಗ ಹೊಂದಿಲ್ಲ.

೨) ತಾಲ್ಲೂಕುವಾರು ಒದಗಿಸಲಾಗಿರುವ ಮಾರ್ಗಸೂಚಿಗಳ ವಿವರ ಈ ಕೆಳಗೆ ನಮೂದಿಸಲಾಗಿದೆ.

೧.	ಕೆ. ಆರ್. ಪೇಟೆ		೨
೨.	ಮಂಡ್ಯ	—	೨೧
೩.	ಮದ್ದೂರು	—	೨೩
೪.	ಮಳವಳ್ಳಿ	—	೧೩
೫.	ನಾಗಮಂಗಲ	—	೩
೬.	ಪಾಂಡವಪುರ	—	೬
೭.	ಶ್ರೀರಂಗಪಟ್ಟಣ	—	೬

ನಾಗಮಂಗಲ ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶಗಳ ರಸ್ತೆ ದುರಸ್ತಿ

೯೪೯ (೧೨೩೦) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ). — ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಳೆದ ೨ ವರ್ಷದಿಂದೀಚೆಗೆ ಜಿಲ್ಲಾ ಪರಿಷತ್ ವತಿಯಿಂದ ನಾಗಮಂಗಲ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಿರುವ ಗ್ರಾಮೀಣ ಪ್ರದೇಶಗಳ ರಸ್ತೆಗಳು ಯಾವುವು?

ಆ) ಇವುಗಳ ದುರಸ್ತಿಗೆ ಸರ್ಕಾರವು ಹಣ ಬಿಡುಗಡೆ ಮಾಡುವುದು ಎಂದು ಬಿಂಡಿಗನವಿಲೆ ಕದಬಹಳ್ಳಿ ರಸ್ತೆಯಲ್ಲಿ ಒಂದು ದಿನಕ್ಕೆ ೨೨ ಬಸ್‌ಗಳು ಓಡಾಡುತ್ತಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲದ ಕಾರಣ ಈ ರಸ್ತೆ ದುರಸ್ತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ನಾಗಮಂಗಲ ತಾಲ್ಲೂಕಿನಲ್ಲಿ ಜಿಲ್ಲಾ ಪರಿಷತ್ ವತಿಯಿಂದ ಲೋಕೋಪಯೋಗಿ ಇಲಾಖೆಗೆ ಮೇಲ್ದರ್ಜೆಗೆ ಏರಿಸಿ ೨೧-೯-೮೯ ರಲ್ಲಿ ಪರ್ಗಾವಾಗಿರುವ ರಸ್ತೆಗಳು ಕೆಳಕಂಡಂತಿದೆ.—

೧)	ಮೇಲುಕೋಟೆ–ಚಿನಕುರಳಿ ರಸ್ತೆ	೫.೦ ಕಿ.ಮೀ.
೨)	ಅತ್ತಿಹಳ್ಳಿ–ಕರಿಕ್ಯಾತನಹಳ್ಳಿ ರಸ್ತೆ	೧೭.೨ ಕಿ.ಮೀ.
೩)	ಚಾಮಲಾಪುರ–ಚನ್ನಾಪುರರಸ್ತೆ	೯.೬ ಕಿ.ಮೀ.
೪)	ಬಿಂಡಿಗನವಿಲೆ–ಚನ್ನಾಪುರ ರಸ್ತೆ	೬.೪ ಕಿ.ಮೀ.
೫)	ಕಡಬಳ್ಳಿ–ಶಿವಿರನಹಳ್ಳಿ ರಸ್ತೆ	೫.೬ ಕಿ.ಮೀ.
	ಒಟ್ಟು	೪೩.೮ ಕಿ.ಮೀ.